ದಿ.30.01.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ

3. ದಿ.28.05.2013 ರಂದು ಕೆ.ಎ.-17 ಇ.ಡಿ.9073 ಸಂಖ್ಯೆಯ ಬಜಾಜ್ ಡಿಸ್ಕವರಿ ವಾಹನದ ಹಾಗೂ ಕೆ.ಎ.17 ಇ.ಹೆಚ್.8880 ಬಜಾಜ್ ಪಲ್ಸರ್ ವಾಹನದ ಅಂದಾಜು ನಿರ್ವಹಣಾ ವೆಚ್ಚವನ್ನು ಕೊಡಬೇಕೆಂದು ದಾವಣಗೆರೆಯ ಆರ್.ಟಿ.ಓ.ದವರಿಗೆ ಪತ್ರ ಬರೆದಿರುತ್ತೇನೆ. ಅದೇ ದಿನಾಂಕದಂದು ದಾವಣಗೆರೆಯ ಜೀವ ವಿಮಾ ನಿಗಮದ ವ್ಯವಸ್ಥಾಪಕರಿಗೆ ಶೋಧನಾ ಸಮಯದಲ್ಲಿ ಸಿಕ್ಕ ವಿಮಾ ಪಾಲಿಸಿಗಳ ವಿವರಗಳನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನಾಂಕದಂದು ಚಿತ್ರದುರ್ಗದ ರೆಡ್ಡಿ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಆರೋಪಿತನ ಪತ್ನಿ ರೇಣುಕಾಂಬರವರ ಹೆಸರಿನಲ್ಲಿ ಇದ್ದ ಎರಡು ಚಲನ್ ಗಳಿಗೆ ಸಂಬಂಧಪಟ್ಟ ವಿವರಗಳನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನಾಂಕದಂದು ಜಗಳೂರಿನ Pawan Distributors ರವರಿಗೆ ಆರೋಪಿತನ ಗ್ಯಾಸ್ ಖಾತೆಯ ವಿವರಗಳನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ. ಆರೋಪಿತನ ಶೋಧನಾ ಸಮಯದಲ್ಲಿ ಸಿಕ್ಕ ಪತ್ರಿಕಾ ಬಿಲ್ಲಿಗೆ ಸಂಬಂಧಿಸಿದಂತೆ ಪತ್ರಿಕಾ ಏಜೆಂಟರಾದ ಬಿ.ವಿ. ನಾಗರಾಜ್ ರವರಿಗೆ ಅದರ ವಿವರಗಳನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನಾಂಕದಂದು ದಾವಣಗೆರೆಯ ತಾಲ್ಲೂಕಿನ ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಆರೋಪಿತನ ಸೇವಾ ಪುಸ್ತಕದ ನಕಲನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ.

4. ದಿ.29.05.2013 ರಂದು ಜಗಳೂರಿನ ಪ್ರಗತಿ ಗ್ರಾಮೀಣ ಬ್ಯಾಂಕಿನ ವ್ಯವಸ್ಥಾಪಕರಿಗೆ ಆರೋಪಿತನ ಉಳಿತಾಯ ಖಾತೆಯ ಹಾಗೂ ಬಂಗಾರದ ಸಾಲದ ಖಾತೆಯ ವಿವರಗಳನ್ನು ಕೊಡಬೇಕೆಂದು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನ ಅವರು ಸದರಿ ದಾಖಲೆಗಳನ್ನು ಕೊಟ್ಟಿರುತ್ತಾರೆ. ದಿ.31.05.2013 ರಂದು Pawan Distributors ರವರು ಆರೋಪಿತನ ಗ್ಯಾಸ್ ವಿವರಗಳನ್ನು ಕೊಟ್ಟಿರುತ್ತಾರೆ. ಅದನ್ನು ಪ್ರಕರಣದಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತೇನೆ. ಅದೇ ದಿನ ಆನಗೋಡಿನ ವಿಜಯಾ ಬ್ಯಾಂಕಿನ ವ್ಯವಸ್ಥಾಪಕರಿಗೆ ಆರೋಪಿತನ ಹೆಸರಿನಲ್ಲಿ ಯಾವುದಾದರೂ ಖಾತೆ ಇದೆಯಾ ಎಂದು ಪತ್ರ ಬರೆದು ಕೇಳಿರುತ್ತೇನೆ. ಅದಕ್ಕೆ ಅವರು ಆರೋಪಿತನ ಹೆಸರಿನಲ್ಲಿ ಯಾವುದೇ ಖಾತೆ ಅವರ ಬ್ಯಾಂಕಿನಲ್ಲಿ ಇಲ್ಲ ಎಂದು ಅದೇ ದಿನ ಉತ್ತರ ಕೊಟ್ಟಿರುತ್ತಾರೆ.

5. ದಿ.01.06.2013 ರಂದು ಸುನೀಲ್ ಗಾಣಿಗೇರ್ ಮತ್ತು ಶಶಿಕಲಾ ಎಂಬ ಪಂಚರೊಂದಿಗೆ ಜಗಳೂರಿನ ಪ್ರಗತಿ ಗ್ರಾಮೀಣ ಬ್ಯಾಂಕಿಗೆ ಭೇಟಿ ಕೊಟ್ಟು ಮಧ್ಯಾಹ್ನ 12.30 ರಿಂದ 1.30 ರವರೆಗೆ ಬ್ಯಾಂಕಿನ ವ್ಯವಸ್ಥಾಪಕರು ಮತ್ತು ಆರೋಪಿತನ ಸಮಕ್ಷಮ ಪಂಚನಾಮೆ ಮಾಡಿ ಬ್ಯಾಂಕಿನಲ್ಲಿ ಆರೋಪಿತನು ಅಡಮಾನ ಮಾಡಿದ್ದ ವಸ್ತುಗಳ ವಿವರವನ್ನು ಸಂಗ್ರಹಿಸಿದೆನು. ಸದರಿ ಪಂಚನಾಮೆಯನ್ನು ಈಗ ನೋಡಿದೆ. ಅದನ್ನು ನಿಪಿ-4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಬಂಗಾರದ ಮೌಲ್ಯ ಮಾಪನ ಮಾಡಿದ ಕೆ.ಎನ್. ಗಣಪತಿ ಹಾಗೂ ಬ್ಯಾಂಕಿನ ವ್ಯವಸ್ಥಾಪಕರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

6. ಅದೇ ದಿನ ಜಗಳೂರಿನ ಪುರಸಭೆಗೆ ಭೇಟಿ ಕೊಟ್ಟು ಆರೋಪಿತ ಮತ್ತು ಆತನ ಪತ್ನಿಯ ಹೆಸರಿನಲ್ಲಿರುವ ನಿವೇಶನಗಳ ಮಾಹಿತಿಯನ್ನು ಕಂದಾಯ ಅಧಿಕಾರಿಯಿಂದ ಪಡೆದುಕೊಂಡಿರುತ್ತೇನೆ. ಆಗ ಕಂದಾಯ ಅಧಿಕಾರಿ ವೀರಚಾರಿಯವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

7. ದಿ.04.06.2013 ರಂದು ದಾವಣಗೆರೆಯ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಂದ ಆರೋಪಿತನ ಸೇವಾ ಪುಸ್ತಕದ ಯಥಾ ನಕಲನ್ನು ಪಡೆದುಕೊಂಡಿರುತ್ತೇನೆ. ದಿ.06.06.2013 ರಂದು ಉಪ ನೋಂದಣಾಧಿಕಾರಿಗಳಿಂದ ಆರೋಪಿತನ ಪತ್ನಿಯ ಹೆಸರಿನಲ್ಲಿರುವ ದೇವೇಗೌಡ ಬಡಾವಣೆಯ ನಿವೇಶನ ಸಂಖ್ಯೆ 71 ರ ಕ್ರಯ ಪತ್ರದ ವಿವರಗಳನ್ನು ಮತ್ತು ಆರೋಪಿತನ ಹೆಸರಿನಲ್ಲಿದ್ದ ನಿವೇಶನ ಸಂಖ್ಯೆ 184 ರ ಕ್ರಯ ಪತ್ರದ ವಿವರಗಳನ್ನು ಮತ್ತು ಭರಮಸಾಗರದಲ್ಲಿರುವ ಆರೋಪಿತನ ಹೆಸರಿನಲ್ಲಿರುವ ಸರ್ವೆ ನಂಬರು 8/3 ರ 3 ಎಕರೆ 18 ಗುಂಟೆ ಜಮೀನಿನ ಕ್ರಯದ ಪತ್ರದ ಪಡೆದುಕೊಂಡಿರುತ್ತೇನೆ.

8. ದಿ.07.06.2013 ರಂದು ಲೋಕಾಯುಕ್ತದ ಅನುಬಂಧ-1 ರಿಂದ 16 ರ ಆರೋಪಿತನಿಗೆ ಸಂಬಂಧಪಟ್ಟ ವಿವರಗಳನ್ನು ಕೊಡಬೇಕೆಂದು ಕೋರಿ ಆರೋಪಿತನ ಮೇಲಧಿಕಾರಿಗಳಿಂದ ಪಡೆಯಲು ಬೆಂಗಳೂರಿನ ಎ.ಡಿ.ಜಿ.ಪಿ.ಯವರಿಗೆ ಪತ್ರ ಬರೆದಿರುತ್ತೇನೆ. ಅದೇ ಪ್ರಕಾರ ಅದೇ ದಿನ ಲೋಕಾಯುಕ್ತದ ಅನುಬಂಧ 17 ರಿಂದ 23 ರ ವಿವರಗಳನ್ನು ಕೊಡಬೇಕೆಂದು ನಿರ್ದೇಶಿಸಿ ಆರೋಪಿತನಿಗೆ ನೋಟೀಸು ಕೊಟ್ಟಿರುತ್ತೇನೆ. ಅದೇ ದಿನ ಆರೋಪಿತನಿಗೆ

ಸಂಬಂಧಿಸಿದ ಮೂರು ಮೊಬೈಲ್ ಗಳ ವಿವರಗಳನ್ನು ಕೊಡಬೇಕೆಂದು ಕೋರಿ ಲೋಕಾಯುಕ್ತ ಎಸ್.ಪಿ. ಯವರಿಗೆ ಪತ್ರ ಬರೆದಿರುತ್ತೇನೆ. ದಿ.14.06.2013 ರಂದು ಚಿತ್ರದುರ್ಗದ ರೆಡ್ಡಿ ಸಹಕಾರ ಬ್ಯಾಂಕಿನ ವ್ಯವಸ್ಥಾಪಕರು ನಾವು ಮೇಲೆ ಕೋರಿದ್ದ ವಿವರಗಳನ್ನು ಕೊಟ್ಟಿರುತ್ತಾರೆ.

( ಉಳಿದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.